# ಮಹಾಲೇಖಾಪಾಲರ ಕಾರ್ಯಾಲಯ

## (ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕಪರಿಶೋಧನೆ)

## ಕರ್ನಾಟಕ, ಬೆಂಗಳೂರು

ಈ ಕಾರ್ಯಾಲಯವು ೨೦೧೮-೧೯ರ ಅವಧಿಯಲ್ಲಿ ಈ ಕೆಳಕಂಡ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳು ಮತ್ತು ಅನುಪಾಲನಾ ಲೆಕ್ಕಪರಿಶೋಧನೆಗಳನ್ನು ನಡೆಸುವ ಪ್ರಸ್ತಾಪನೆಯಿದೆ:

**(1) ಬೆಂಗಳೂರಿನಲ್ಲಿ ತ್ಯಾಜ್ಯ ನೀರಿನ (ಕೊಳಚೆ ನೀರು) ನಿರ್ವಹಣೆ**

**(2) ಬೆಂಗಳೂರಿನಲ್ಲಿ ಮಳೆನೀರಿನ ಒಳಚರಂಡಿ ನಿರ್ವಹಣೆ**

**(3) ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ**

**(4) ಪರಿಶಿಷ್ಟಜಾತಿ ವಿದ್ಯಾರ್ಥಿಗಳ ಮೆಟ್ರಿಕ್‌ಪೂರ್ವ ಮತ್ತು ನಂತರದ ವಿದ್ಯಾರ್ಥಿವೇತನ, ಹೆಚ್ಚುವರಿ ಭೋಜನ ಮತ್ತು ವಸತಿ ವೆಚ್ಚ ಪಾವತಿ ಹಾಗು ಮೆಟ್ರಿಕ್‌ಪೂರ್ವ ಮತ್ತು ನಂತರದ ಸರ್ಕಾರಿ ವಿದ್ಯಾರ್ಥಿನಿಲಯಗಳ ನಿರ್ಮಾಣ ಮತ್ತು ನಿರ್ವಹಣೆ**

ಲೆಕ್ಕಪರಿಶೋಧನೆಯನ್ನು ನಡೆಸುವಾಗ ರಾಜ್ಯದಲ್ಲಿನ ಎಲ್ಲ ಸಂಬಂಧಪಟ್ಟ ಪಾಲುದಾರರನ್ನು ಒಳಗೊಳ್ಳುವ ಉದ್ದೇಶದಿಂದ ಸಂಬಂಧಪಟ್ಟ ಜನಸಾಮಾನ್ಯರು ಹಾಗು ಸಂಸ್ಥೆಗಳಿಂದ ಅಭಿಪ್ರಾಯಗಳನ್ನು ಸಂಗ್ರಹಿಸಿದ ನಂತರ ಲೆಕ್ಕಪರಿಶೋಧನೆ ಮಾಡುವ ವಿಷಯವನ್ನು ಅಂತಿಮಗೊಳಿಸಲು ಉದ್ದೇಶಿಸಲಾಗಿದೆ. ಈ ಸಂಬಂಧವಾಗಿ ಜನಸಾಮಾನ್ಯರು ಹಾಗೂ ಸಂಸ್ಥೆಗಳು ಈ ಕೆಳಕಂಡ ವಿಷಯಗಳನ್ನು ತಿಳಿಸಬಹುದು:

**(1) ಸಾರ್ವಜನಿಕ ಕಾಳಜಿಯ ವಿಷಯಗಳು**

**(2) ಮೇಲಿನ ಕ್ಷೇತ್ರಗಳಿಗೆ ಸಂಬಂಧಪಟ್ಟಂತೆ ಸುಧಾರಣೆಗಳು/ಇತರ ಯಾವುದೇ ಸಂಬಂಧಿಸಿದ ವಿಷಯಗಳು**

ನಿಮ್ಮ ಸಲಹೆಗಳನ್ನು ಈ ಕೆಳಗಿನ ಯಾವುದಾದರೂ ವಿಧಾನದ ಮೂಲಕ ಒಂದು ತಿಂಗಳೊಳಗೆ ನಮಗೆ ತಿಳಿಸಬಹುದು

**ಇ-ಮೇಲ್ : agaukarnataka1@cag.gov.in**

**ಅಂಚೆ ವಿಳಾಸ:** ಮಹಾಲೇಖಾಪಾಲರ ಕಾರ್ಯದರ್ಶಿ, ಮಹಾಲೇಖಾಪಾಲರ ಕಾರ್ಯಾಲಯ
(ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕಪರಿಶೋಧನೆ),
ಆಡಿಟ್ ಭವನ, ಬಹುಮಹಡಿ ಕಟ್ಟಡಗಳ ಪಕ್ಕದಲ್ಲಿ, ಬೆಂಗಳೂರು-೫೬೦೦೦೧.

**ಮಹಾಲೇಖಾಪಾಲರು**
**(ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕಪರಿಶೋಧನೆ)**